RegaNo BC 155

Sri "SATYAVADI"
— DAILY —
MYSORE 4
46 th Year

Protect the cow

— ೬೧ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಕೇದಾರ್ ಎಂ. ವಿ. ಪುಟ್ಟರಂತಯ್ಯರು [ಬಿಡಿ ಪ್ರತಿ 3 ಪೈ

8—3—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಕೇರಳದ ಆದಂತ ಚಳುವಳಿಯ ಶೆ ಬೆದರಿಕೆ

ಕೇಂಳ ಮಂತ್ರಿಮಂಡಲದಿಂದ ಪ್ರಜಾ ಸೋಷಲಿಸ್ಟರು ಹೊರಬಂದೆ ಇದ್ದರೆ ಈಗಿರುವ ಸಮ್ಮಿಶ್ರ ಸರ್ಕಾರವನ್ನು ಹೊರಗೆ ಹಾಕಲು ದೇಶದ ಅದ್ಯಂತ ಚಳುವಳಿ ಹೂಡುವದಾಗಿ ಬಂಡುಕೋರ ಪ್ರಜಾ ಸೋಷಲಿಸ್ಟ ನಾಯಕ ಶ್ರೀ ಕುಂಬಲಕು ಸುಂಕು ಪಿಳ್ಳೆ ಎಚ್ಚರಿಸಿದ್ದಾರೆ. ಅಂಥ ಪರಿಸ್ಥಿತಿ ಉಂಟಾಗದಿರಲಿ ಎಂದು ಕಾಂಗ್ರೆಸ್ ಈ ವೇಳೆಗೆ ತಿಳಿದಿಂಬೇಕು ಎಂದು ತಿಳಿಸಿರುವರು ಚ ನಾವಣೆ ಫಲಿತಾಂಶವನ್ನು, ಸಮ್ಮಿಶ್ರ ಮಂತ್ರಿಮಂಡಲದ ಮೇಲೆ ಅವಿಶ್ವಾಸ ರೀತಿ ಎಂಬಂತೆ ತಿಳಿಯಬೇಕೆಂದು ಅವರು ಹೇಳಿದ್ದಾರೆ.

ಬೋರ್ಡ್ ಇಡಿ

ತಿರುವೇಂದ್ರಂನಲ್ಲಿ ಸಮಾವೇಶವಾಗಿರುವ ಕೇಂಳ ವಿಧಾನ ಸಭೆಯಲ್ಲಿ ನಿನ್ನೆ ಜೋಸೆಫ್ ಜಾಹಿರಕರ್ತರವರು ಭಾಷಣ ಮಾಡುತ್ತಾ, ಮಂತ್ರಿಗಳು ಹಾಗೂ ಇತರೆ ಮುಖ್ಯಾಧಿಕಾರಿಗಳು ತಮ್ಮ ಟೇಬಲು ಮೇಲೆ, ಸೀಸನ ಪತ್ತಿ ಸಂದೇಹಾತೀತಳಾಗಿರಬೇಕೆಂಬ ಬೋರ್ಡು ಹೊಂದಿರಬೇಕೆಂದು ನುಡಿದರು ವಿಚಾರಣೆ ಹಾಗೂ ಸಮನ್ಸು ವಾರೆಂಟು ಮೇಲೆ ಮಾತನಾಡುತ್ತಾ, ಉನ್ನತ ಅಧಿಕಾರಿಗಳವರು ಲಂಚಕೋರರಲ್ಲದಿದ್ದರೆ ಕೆಳಗಿನ ಅಧಿಕಾರಿಗಳು ಲಂಚಕೋರರಾಗದಂತೆ ಇರುವ ನಿರೀಕ್ಷಣೆ ಮಾಡಬಹುದು ಎಂದವರು ನುಡಿದರು.

ಅಮೆರಿಕ ಪ್ರವಾಸ

ಮಾರ್ಚ್ ತಾ|| 15 ರಂದು ಸಿನಿಮಾ ನಟ ಶ್ರೀ ಶಿವಾಜಿ ಗಣೇಶ್ ಅಮೆರಿಕಕ್ಕೆ ತೆರಳಲಿದ್ದು ಎರಡು ತಿಂಗಳು ಪ್ರವಾಸ ಮಾಡುವರು. ಅಮೆರಿಕ ಸರ್ಕಾರ ಅವರಿಗೆ ಆಹ್ವಾನವಿತ್ತಿದೆ ಅಲ್ಲಿನ ನಾಟಕ ಕಲೆಯನ್ನು ಅವರು ಅಧ್ಯಯನ ಮಾಡುವರು.

ಸಭೆಯಲ್ಲಿ ಗೊಂದಲ

ಭದ್ರಾವತಿಯಲ್ಲಿ ಸಮಾವೇಶವಾಗಿರುವ ಒರಿಸ್ಸಾ ವಿಧಾನ ಸಭೆಯಲ್ಲಿ ಸ್ವತಂತ್ರ ಪಕ್ಷದ ನಾಯಕ ಶ್ರೀ ಆರ್ ಎನ್. ಸಿಂಗ್ ದೇವ್ ನೂತನವಾಡಿ, ಕಳೆದ ಶನಿವಾರ ಮುಖ್ಯ-ಮಂತ್ರಿ- ಶ್ರೀ - ಬಿಜಯೋನಾನಂದ ಪಾಟ್ನಾಯಿಕರು ಮಾಡಿದ ಅಗೌರವ ವರ್ತನೆಗೆ ತಿದ್ದುಪಡಿ ಮಾಡದಿರುವ ವರಿಗೆ ತಮ್ಮ ಪಕ್ಷ ಅವರನ್ನು ಕೇಳುವದಿಲ್ಲ ಮತ್ತು ಅವರಿಗೆ ಮಾತನಾಡಲು ಅವಕಾಶ ಮಾಡುವದಿಲ್ಲ ಎಂದರು.

ನಿನ್ನೆ ಸಭೆ ಆರಂಭವಾದಾಗ ಪ್ರಶ್ನೋತ್ತರ ಕಾಲದಲ್ಲಿ ಮುಖ್ಯ ಮಂತ್ರಿಗಳು ಹೇಳುವದನ್ನು ಕೇಳುವದಿಲ್ಲವೆಂದು ಮೇಜನ್ನು ಬಡಿದು ಸ್ವತಂತ್ರ ಪಕ್ಷದವರು ಅಬ್ಬರಿಸಿದಾಗ ಸಭೆಯಲ್ಲಿ ಗೊಂದಲವಾಯಿತು.

ಆಶ್ಚರ್ಯ ಪತ್ರಗಳು

ಚಿಂದ್ವಾರದಲ್ಲಿ ದೊರೆತ ಆಶ್ಚರ್ಯಕರ ಮತದಾನ ಪತ್ರಗಳನ್ನು ಜಿಲ್ಲಾ ರಿಟರ್ನಿಂಗ್ ಆಫೀಸರು ಮುಖ್ಯ ಚುನಾವಣೆ ಅಧಿಕಾರಿಗಳಿಗೆ ಕಳಿಸಿರುವರೆಂದು ಜಬಲ್ಪುರ ವಾರ್ತೆ. ಉರಿಯುತ್ತಿರುವ ಸಮಸ್ಯೆಗಳಾದ ಅನ್ನ, ಬಟ್ಟೆ, ವಸತಿಗಳ ಕುರಿತು ಚುನಾವಣೆ ನಡೆಯದಿರುವ ವಿರೋಧ ಪ್ರಧಾನಿ ನೆಹರುರವರಿಗೆ ಸಲಹೆ ಮತದಾನಪತ್ರವೊಂದರಲ್ಲಿ ಇದೆ ಯಾರೂ ಅರ್ಹರು ಇಲ್ಲವೆಂದು ಮತ್ತೊಂದು ಪತ್ರದಲ್ಲಿ ಇದೆ ಮತ್ತೊಂದು ಪತ್ರದಲ್ಲಿ ಪದ್ಯ ಬರೆದಿದೆ.

೦೦

ಕಚ್ಚಾ ಪದಾರ್ಥಗಳ ಆಮದಿಗೆ ಈ ತಿಂಗಳ ಕಡೆಯಲ್ಲಿ ಭಾರತಕ್ಕೆ ಅಮೆರಿಕ ಭಾರಿ ಸಾಲವನ್ನು ನೀಡಲಿದೆ.

ಮೈಸೂರಿಗೆ ದಲ್ಯಾ ಲಾಮಾ

ಈ ತಿಂಗಳ 16 ರಿಂದ 22 ನೆಯ ತಾ|| ನೊಳಗೆ ಟಿಬೆಟಿನ ಧರ್ಮಗುರು ದಲೈ ಲಾಮಾ ಬೆಂಗಳೂರು ಮತ್ತು ಮೈಸೂರಿಗೆ ಭೇಟಿಕೊಡುವರು ಇದ್ದು ಖಾಸಗಿ ಭೇಟಿ ಆದ ಕಾರಣ ಅವರು ಯಾವ ಕಾರ್ಯಕ್ರಮವನ್ನು ಒಪ್ಪಿಕೊಳ್ಳುವದಿಲ್ಲ.

ಸರ್ಕಾರದ ಸೂಚನೆ

ಉತ್ತರ ಪ್ರದೇಶದ ಮಧುರಾಂತದಲ್ಲಿ ನಡೆಯುವ ಕುಂಭಮೇಳದಲ್ಲಿ ಭಾಗವಹಿಸುವವರು ಕಾಲರಾ ಇನಾಕ್ಯುಲೇಷನ್ ಮಾಡಿಸಿಕೊಂಡು ಸರ್ಟಿಫಿಕೇಟು ತೆಗೆದುಕೊಂಡು ಹೋಗುವಂತೆ ಮೈಸೂರು ಸರ್ಕಾರ ಸೂಚಿಸಿದೆ.

TENDER NOTICE

Sealed Tenders for the supply of provisions etc , to the Palace during 1962-63 will be received by the undersigned on 12-3-1962 up to 3-00 P. M.

Details of the tender may be obtained from the Munib, Palace Mothikhana Department Mysore. The prescribed forms may be obtained from the Munib on payment of Re. 1/- each.

D. J. BALARAJ,
Secretary to
H.H. the Maharaja of Mysore.

ಸಾಲೆಯ ಪಂಚಾಂಗ

ಅಸ್ಥಾನ ವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಸ್ತ್ರಜ್ಯೋಯಿಸರಂದ

9 ತೃತೀಯಾ ರೇವತಿ

ಆತ್ಮಹತ್ಯೆ ವಿಫಲ

ರೋಂನಿಂದ ವಾರ್ತೆ ಬಂದಿದೆ. ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ 4 ನೇ ಅಂತಸ್ತಿನಿಂದ 38ವರ್ಷದ ಲೀಸಲಿಸ್ಸೋನೆ ಬಿದ್ದಳು . ಬೀಸುತ್ತಿದ್ದ ಗಾಳಿ 3 ನೇ ಅಂತಸ್ತಿಗೆ ಅವಳನ್ನು ಬಿಟ್ಟಿತು ಮತ್ತೆ ಬೀಳಲು 2 ನೇ ಅಂತಸ್ತಿನ ಬಾಲ್ಕನಿಗೆ ಬಿದ್ದಳು ಕಾಲು ಮುರಿಯಿತು.

೦೦

ಆಂಧ್ರ ಶಾಸನ ಸಭೆ ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀ ಎಸ್ ಬೀವ ರೆಡ್ಡಿಯವರು ಮುಖ್ಯ ಮಂದ್ರಿಯು ಶಾಸನ ಸಭೆ ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀ ಕಾವ ರಾಜ ನಾಡಶರರು ನಿನ್ನೆ ಸರ್ವಾನುಮತದಿಂದ ಆಯ್ಕೆಯಾದರು.

ಕಳೆದ ಸವೆಂಬರಿನಿಂದ ದಂಡಕಾರಣ್ಯಕ್ಕೆ ಪಟ್ಟಿನು ಒಂಗಾಳದಿಂದ 549 ಕುಟುಂಬಗಳ 2537 ಜನರು ಹೋಗಿರುವರು

ಬಾಂಕಾಕಿನಲ್ಲಿ ನಿನ್ನೆ ಆದ ಬೆಂಕಿ ಅನಾಹುತದಿಂದ ಸಾವಿರ ಮಂದಿ ನಿರ್ವಾಸಿಕರಾದರು. 20 ಮಿಲಿಯ ಟ್ಯೆಡಲ್ ನಷ್ಟವಾಗಿದೆ

ಬೊಂಬಾಯಿನ ಕ್ಲೀವ ರಸ್ತೆಯಲ್ಲಿ ನಿನ್ನೆ 2 ಸಕ್ಕರೆ ಗುಂಪಿಗೆ ಹೊಡೆದಾಟವಾಗಿ 3 ಮಂದಿ ಸತ್ತರು.

4ಲಕ್ಷ ಬೆಲೆಯ ಮಂಮುಟ್ಟು ವೀರಗಂಗಲ್ಲಿ ದಹನವಾಯಿತೆಂದು ಅಹಮದಾಬಾದು ವಾರ್ತೆ.

★

ಮೈಸೂರು ಶಾಸನ ಸಭೆ ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀ ಎಸ್. ಆರ್. ಕಂಠಿಯವರು ಆಯ್ಕೆ ಆದರು

ಕೇಂದ್ರ ಗೃಹ ಮಂತ್ರಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರು ನೇತೃತ್ವದಲ್ಲಿ ಈ ವಿದ್ಯಾರ್ಥಿ ಪಕ್ಷದ ಸಭೆಯಲ್ಲಿ ನಡೆದ ಗೃಹಸಚಿವಾಲಯದಲ್ಲಿ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯವರು ಕಂಠಿಯವರಿಗಿಂತ ಕಡಿವೆ ಓಟು ಪಡೆದರು

ಪೌರಸಭೆ

ಮೈಸೂರು— ಮುಂದುವರಿದ ಪೌರಸಭೆ ವಿಶೇಷ ಸಭೆಯು ನಾಳೆ ಮಧ್ಯಾಹ್ನ 4 ಗಂಟೆಗೆ ನಡೆಯುವುದು.

ಕುಟುಂಬ ಯೋಜನೆ

ಜನಸಂಖ್ಯೆ ಅಭ್ಯಾಸದ ಭಾರತಸಂಸ್ಥೆ ಡೈರೆಕ್ಟರರಾದ ಡಾ|| ಎಸ್ ಚಂದ್ರಶೇಖರ ಮದ್ರಾಸಿನಲ್ಲಿ ಹೇಳಿಕೆಯನ್ನಿತ್ತರು. ಭಾರತದಂಥಹ ರಾಷ್ಟ್ರದಲ್ಲಿ ಭಾರಿ ಆರ್ಥಿಕ ಅಭಿವೃದ್ಧಿ ಹೊಂದಬೇಕಾದರೆ ಕುಟುಂಬ ಯೋಜನೆ ಅತ್ಯಗತ್ಯವೆಂದರು.

ಶಾಂತಿಸಾಗರದ ವಯಸ್ಸು

ಶಾಂತ ಮಹಾಸಾಗರವು (ಪೆಸಿಫಿಕ್) 10 ಕೋಟಿ ವರ್ಷಗಳಿಂದ ಅಸ್ತಿತ್ವದಲ್ಲಿದೆಯೆಂದು ' ವಿತ್ಯಾಜ್ ' ಸಾಗರ ಸಂಶೋಧನ ನೌಕೆಯ ವಿಜ್ಞಾನಿಗಳು ಸಾಗರಾಂತರಾಳ ಸಂಶೋಧನೆಯು ಶಾಸ್ತ್ರೀಯವಾಗಿ ನಿರ್ಧರಿಸುವರು.

ಚಾಲಕರಿಲ್ಲದ ರೈಲು

ಮಾಸ್ಕೋ ಭೂಗರ್ಭ ರೈಲ್ವೆಯಲ್ಲಿ ಚಾಲಕರಿಲ್ಲದೆಯೇ ಎಲೆಕ್ಟ್ರಾನಿಕ್ ಗಣಕ ಯಂತ್ರದಿಂದ ನಡೆಯುವ ರೈಲ್ವೇಗಾಡಿಯನ್ನು ಈಗ ಪರೀಕ್ಷಿಸಲಾಗಿದೆ : ಈಗಾಗಲೇ ದಿನಕ್ಕೆ 3000000 ಕ್ಕಿಂತಲೂ ಹೆಚ್ಚು ಜನರು ಈ ರೈಲ್ವೇ ಪ್ರಯಾಣ ಮಾಡುತ್ತಿದ್ದಾರೆ.

ವಿನೋದ

ಒಡಾಪೆಸ್ಟಿನ ಒಂದು ಶಾಲೆಯಲ್ಲಿ ಉಪಾಧ್ಯಾಯನು ಕೇಳಿದ ಒಂದು ಪ್ರಶ್ನೆಗೆ ಒರ್ವ ವಿದ್ಯಾರ್ಥಿಯು ಹೀಗೆ ಉತ್ತರವಿತ್ತನು— ' ನಮ್ಮ ಬೆಕ್ಕಿಗೆ ಹತ್ತು ಮರಿಗಳಿವೆ : ಎಲ್ಲವೂ ಒಳ್ಳೆಯ ಸಮತಾವಾದಿಗಳಾಗಿವೆ.

ಈ ಉತ್ತರದಿಂದ ಉಪಾಧ್ಯಾಯನಿಗೆ ಸಂತೋಷವಾಯಿತು.

ಶಾಲಾ ಇನ್ಸ್ಪೆಕ್ಟರನು ಬಂದಾಗ, ಉಪಾಧ್ಯಾಯನು ಅದೇ ವಿದ್ಯಾರ್ಥಿಯನ್ನು ಭಂಡವೆಯಿಂದ ಕರೆದು, ಆ ಮೊದಲಿನ ಪ್ರಶ್ನೆಯನ್ನೇ ಕೇಳಿದನು ; ವಿದ್ಯಾರ್ಥಿಯು ಈ ಬಾರಿ ಹೀಗೆಂದು ಉತ್ತರಕೊಟ್ಟನು— ನಮ್ಮ ಬೆಕ್ಕಿಗೆ ಹತ್ತು ಮರಿಗಳಿವೆ ; ಎಲ್ಲವೂ ಒಳ್ಳೆಯ ಪ್ರಜಾಪ್ರಭುತ್ವವಾದಿಗಳಾಗಿವೆ.

ಉಪಾಧ್ಯಾಯನು ದಿಗಿಲುಗೊಂಡು ಕೇಳಿದನು— ಏಕೆ ? 10 ದಿನಗಳ ಮೊದಲು ನೀನು ಹೇಳಿದ್ದು ಅದಲ್ಲ. ಆಗ ನಿನ್ನ ಬೆಕ್ಕಿನ ಮರಿಗಳು ಸಮತಾವಾದಿಗಳಾಗಿದ್ದವು !

ವಿದ್ಯಾರ್ಥಿಯು ಉತ್ತರವಿತ್ತನು— ಅಹುದು. ಆದರೆ ಈಗ ಅವುಗಳ ಕಣ್ಣುಗಳ ತೆರೆದಿವೆ !

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

SHAKTI SUDHA

A Superb Tonic

Edited, Printed & Published by the Proprietor, Dharma Prachara Nirata M. S. Krishna Rao at the Sahyadri Press Chamarajapuram, Mysore 4.

THE DIFFERENCE BETWEEN THIS...

TRADE MARK

AND THIS... IS ALWAYS THIS..

GRIPE SYRUP I.T.L.

For digestive disorders of children.

THE MYSORE INDUSTRIAL & TESTING LABORATORY LTD., BANGALORE-3.

Madras Sales Office:- 35137, THAMBU CHETTY STREET, MADRAS-1.

Our Bangalore Sales Depot address—

71/4 Arcot Sreenivasachar St., Bangalore 2.

ವುಡ್‌ಲ್ಯಾಂಡ್ಸ್ ಕೀರ್ತಿಯುತ **4** ನೇ ವಾರ

.... ನೋಡಿದವರೆಲ್ಲಾ ಪ್ರಶಂಸಿಸುತ್ತಿರುವ ಅಮೋಘ ಚಿತ್ರ ವಸ್ತು ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಜೆಲಕ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜಯಪ್ರದ **2** ನೇ ವಾರ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]



ನವದೆಹಲಿಯಲ್ಲಿ ಗಣರಾಜ್ಯ ದಿನೋತ್ಸವದಂದು ಲೋಕೋಪಯೋಗಿ ಶಾಖೆಯು ತೋಲಗಾಕೆ ವಿಭಾಗದವರಿಗೆ ನೇರಿದ ಟ್ಯಾಬ್ಲೋ ಇಲ್ಲಿ ಕಾಣಬರುವುದು